4

ಒಟ್ಟು ಮುದ್ರಿತ ಪುಟಗಳ ಸಂಖ್ಯೆ : 12 ]

Total No. of Printed Pages : 12 ]

ಒಟ್ಟು ಪ್ರಶ್ನೆಗಳ ಸಂಖ್ಯೆ : 48 ]

Total No. of Questions : 48 ]

**ಸಂಕೇತ ಸಂಖ್ಯೆ : 85-K**

**Code No. : 85-K**

# D

**CCE PR**
**UNREVISED**
**REDUCED SYLLABUS**
**NSR & NSPR**

**Question Paper Serial No. 813**

# ವಿಷಯ : ಸಮಾಜ ವಿಜ್ಞಾನ

# Subject : SOCIAL SCIENCE

**(ಕನ್ನಡ ಮಾಧ್ಯಮ / Kannada Medium)**

**(ಪುನರಾವರ್ತಿತ ಖಾಸಗಿ ಅಭ್ಯರ್ಥಿ / ಎನ್.ಎಸ್.ಆರ್. & ಎನ್.ಎಸ್.ಪಿ.ಆರ್.)**

**(Private Repeater / NSR & NSPR)**

ದಿನಾಂಕ : 15. 06. 2023 ] [ Date : 15. 06. 2023

ಸಮಯ : ಬೆಳಗ್ಗೆ 10-30 ರಿಂದ ಮಧ್ಯಾಹ್ನ 1-45 ರವರೆಗೆ ] [ Time : 10-30 A.M. to 1-45 P.M.

ಗರಿಷ್ಠ ಅಂಕಗಳು : 100 ] [ Max. Marks : 100

## *ಪರೀಕ್ಷಾರ್ಥಿಗಾಗಿ ಸಾಮಾನ್ಯ ಸೂಚನೆಗಳು :*

1. ಈ ಪ್ರಶ್ನೆಪತ್ರಿಕೆಯು ವಸ್ತುನಿಷ್ಠ ಮತ್ತು ವಿಷಯನಿಷ್ಠ ಮಾದರಿಯ ಒಟ್ಟು 48 ಪ್ರಶ್ನೆಗಳನ್ನು ಹೊಂದಿದೆ.
2. ಈ ಪ್ರಶ್ನೆಪತ್ರಿಕೆಯನ್ನು ಹಿಮ್ಮುಖ ಜಾಕೆಟ್ ಮೂಲಕ ಮೊಹರು (ಸೀಲ್) ಮಾಡಲಾಗಿದೆ. ಪರೀಕ್ಷೆ ಪ್ರಾರಂಭವಾಗುವ ಸಮಯಕ್ಕೆ ನಿಮ್ಮ ಪ್ರಶ್ನೆಪತ್ರಿಕೆಯ ಬಲಬದಿ ಪಾರ್ಶ್ವವನ್ನು ಕತ್ತರಿಸಿ, ಪ್ರಶ್ನೆಪತ್ರಿಕೆಯಲ್ಲಿ ಎಲ್ಲಾ ಪುಟಗಳು ಇವೆಯೇ ಎಂದು ಪರೀಕ್ಷಿಸಿಕೊಳ್ಳಿ.
3. ವಸ್ತುನಿಷ್ಠ ಮತ್ತು ವಿಷಯನಿಷ್ಠ ಮಾದರಿಯ ಪ್ರಶ್ನೆಗಳಿಗೆ ಕೊಟ್ಟಿರುವ ಸೂಚನೆಗಳನ್ನು ಪಾಲಿಸಿ.
4. ಬಲ ಭಾಗದಲ್ಲಿ ಕೊಟ್ಟಿರುವ ಅಂಕಿಗಳು ಪ್ರಶ್ನೆಗಳಿಗಿರುವ ಪೂರ್ಣ ಅಂಕಗಳನ್ನು ತೋರಿಸುತ್ತವೆ.
5. ಪ್ರಶ್ನೆಪತ್ರಿಕೆಯನ್ನು ಓದಿಕೊಳ್ಳಲು 15 ನಿಮಿಷಗಳ ಕಾಲಾವಕಾಶವು ಸೇರಿದಂತೆ, ಉತ್ತರಿಸಲು ನಿಗದಿಪಡಿಸಲಾದ ಸಮಯವನ್ನು ಪ್ರಶ್ನೆಪತ್ರಿಕೆಯ ಮೇಲ್ಭಾಗದಲ್ಲಿ ನೀಡಲಾಗಿದೆ.

ಇಲ್ಲಿಂದ ಕತ್ತರಿಸಿ

**TEAR HERE TO OPEN THE QUESTION PAPER**
**ಪ್ರಶ್ನೆಪತ್ರಿಕೆಯನ್ನು ತೆರೆಯಲು ಇಲ್ಲಿ ಕತ್ತರಿಸಿ**

**Tear here**

**I. ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಆಯ್ಕೆಗಳನ್ನು ನೀಡಲಾಗಿದೆ. ಅವುಗಳಲ್ಲಿ ಸೂಕ್ತವಾದ ಒಂದು ಉತ್ತರವನ್ನು ಆರಿಸಿ, ಅದರ ಕ್ರಮಾಕ್ಷರದೊಡನೆ ಪೂರ್ಣ ಉತ್ತರವನ್ನು ಬರೆಯಿರಿ :** **8 × 1 = 8**

1. ಎರಡನೇ ಆಂಗ್ಲೋ–ಮರಾಠ ಯುದ್ಧವನ್ನು ಕೊನೆಗೊಳಿಸಿದ ಒಪ್ಪಂದ

   (A) ಸಾಲ್‌ಬಾಯ್ ಒಪ್ಪಂದ

   (B) ಲಾಹೋರ್ ಒಪ್ಪಂದ

   (C) ಬೆಸ್ಸಿನ್ ಒಪ್ಪಂದ

   (D) ಮದ್ರಾಸ್ ಒಪ್ಪಂದ

2. ಬ್ರಿಟಿಷರು ದೋಂಡಿಯಾ ವಾಘ್‌ನನ್ನು ಹತ್ಯೆಗೈದ ಸ್ಥಳ

   (A) ಶಿಕಾರಿಪುರ

   (B) ರಾಯಚೂರು

   (C) ಶಿರಹಟ್ಟಿ

   (D) ಕೋನಗಲ್

3. ವಿಶ್ವಸಂಸ್ಥೆಯ ಭದ್ರತಾ ಸಮಿತಿಯಲ್ಲಿ ಭಾರತಕ್ಕೆ ಖಾಯಂ ಸದಸ್ಯತ್ವ ದೊರೆಯಬೇಕೆಂದು ಪ್ರತಿಪಾದಿಸುತ್ತಿರುವ ದೇಶ

(A) ಅಮೆರಿಕಾ ಸಂಯುಕ್ತ ಸಂಸ್ಥಾನ

(B) ಬ್ರಿಟನ್

(C) ರಷ್ಯಾ

(D) ಫ್ರಾನ್ಸ್

4. ನರ್ಮದಾ ಬಚಾವೋ ಆಂದೋಲನದ ನೇತೃತ್ವ ವಹಿಸಿದ್ದವರು

(A) ಶಿವರಾಮ ಕಾರಂತ

(B) ಸುಂದರಲಾಲ್ ಬಹುಗುಣ

(C) ಮೇಧಾ ಪಾಟ್ಕರ್

(D) ಕುಸುಮಾ ಸೊರಬ

5. ಸಟ್ಲೆಜ್ ನದಿಗೆ ಅಡ್ಡಲಾಗಿ ನಿರ್ಮಿಸಿದ ವಿವಿಧೋದ್ದೇಶ ನದಿ ಕಣಿವೆ ಯೋಜನೆ

(A) ಭಾಕ್ರಾ-ನಂಗಲ್ ಯೋಜನೆ

(B) ಹಿರಾಕುಡ್ ಯೋಜನೆ

(C) ಪಂಪ ಸಾಗರ

(D) ನಾಗಾರ್ಜುನ ಸಾಗರ ಯೋಜನೆ

6. ಭಾರತದ ಸಿಲಿಕಾನ್ ಸಿಟಿ

(A) ಮುಂಬಯಿ

(B) ಚೆನ್ನೈ

(C) ದೆಹಲಿ

(D) ಬೆಂಗಳೂರು

7. ಜನರು ತಮ್ಮ ಒಡವೆ ಮತ್ತು ಬೆಲೆಬಾಳುವ ವಸ್ತುಗಳನ್ನು ಸಂರಕ್ಷಿಸಿಡಲು ಬ್ಯಾಂಕುಗಳಿಂದ ಪಡೆಯುವ ಸೇವೆಯು

(A) ಉಳಿತಾಯ ಖಾತೆ ಸೇವೆ

(B) ಭದ್ರತಾ ಕಪಾಟು ಸೇವೆ

(C) ನಿಶ್ಚಿತ ಠೇವಣಿ ಖಾತೆ ಸೇವೆ

(D) ಚಾಲ್ತಿ ಖಾತೆ ಸೇವೆ

8. "ಭಾರತದ ನೈಜ ಅಭಿವೃದ್ಧಿ ಎಂದರೆ ಅದು ಗ್ರಾಮಗಳ ಅಭಿವೃದ್ಧಿ" ಎಂದು ಹೇಳಿದವರು.

(A) ಸರ್ ಎಂ. ವಿಶ್ವೇಶ್ವರಯ್ಯ

(B) ಮಹಾತ್ಮಾ ಗಾಂಧೀಜಿ

(C) ಡಾ. ಬಿ.ಆರ್. ಅಂಬೇಡ್ಕರ್

(D) ಜವಾಹರಲಾಲ್ ನೆಹರೂ

**II. ಕೆಳಗಿನ ಪ್ರತಿಯೊಂದು ಪ್ರಶ್ನೆಗೂ ಒಂದೊಂದು ವಾಕ್ಯದಲ್ಲಿ ಉತ್ತರ ಬರೆಯಿರಿ : 8 × 1 = 8**

9. ಭಾರತ ರಾಷ್ಟ್ರೀಯ ಕಾಂಗ್ರೆಸ್‌ನ ಹರಿಪುರ ಅಧಿವೇಶನದ ಅಧ್ಯಕ್ಷತೆ ವಹಿಸಿದ್ದವರಾರು ?

10. "ಅಭಿನವ ಭಾರತ" ಎಂಬ ರಹಸ್ಯ ಸಂಘಟನೆಯನ್ನು ಆರಂಭಿಸಿದವರು ಯಾರು ?

11. ಮಾನವ ಹಕ್ಕುಗಳ ದಿನವನ್ನಾಗಿ ಆಚರಿಸುವ ದಿನ ಯಾವುದು ?

12. ಮಹಾತ್ಮಾ ಗಾಂಧೀಜಿಯವರು ಅಸ್ಪೃಶ್ಯತೆಯನ್ನು ಏನೆಂದು ಹೇಳಿದ್ದಾರೆ ?

13. ಭಾರತದಲ್ಲೇ ಅತೀ ಕಡಿಮೆ ಮಳೆ ದಾಖಲೆ ಹೊಂದಿರುವ ಪ್ರದೇಶ ಯಾವುದು ?

14. ಶ್ರಮ ವಿಭಜನೆ ಕುರಿತು ಪ್ಲೇಟೋ ಏನೆಂದು ಹೇಳಿದ್ದಾರೆ ?

15. ಗ್ರಾಮೀಣ ಪ್ರದೇಶಗಳಲ್ಲಿ 'ಮಹಿಳಾ ಸ್ವಸಹಾಯ ಸಂಘ'ಗಳನ್ನು ಏಕೆ ಅಸ್ತಿತ್ವಕ್ಕೆ ತರಲಾಗಿದೆ ?

16. ರಾಷ್ಟ್ರೀಯ ಉಳಿತಾಯ ಪತ್ರಗಳನ್ನು ಯಾವ ಇಲಾಖೆಯು ನೀಡುತ್ತದೆ ?

**III. ಕೆಳಗಿನ ಪ್ರತಿಯೊಂದು ಪ್ರಶ್ನೆಗೂ ಎರಡರಿಂದ ನಾಲ್ಕು ವಾಕ್ಯಗಳಲ್ಲಿ ಅಥವಾ ಅಂಶಗಳಲ್ಲಿ ಉತ್ತರಿಸಿ : 18 × 2 = 36**

17. ಪಂಚಶೀಲ ತತ್ವಗಳಾವುವು ?

**ಅಥವಾ**

ವಸಾಹತುಶಾಹಿ ಆಳ್ವಿಕೆಗೆ ಒಳಪಟ್ಟ ಆರ್ಥಿಕವಾಗಿ ಹಿಂದುಳಿದ ರಾಷ್ಟ್ರಗಳ ಪ್ರಮುಖ ಲಕ್ಷಣಗಳಾವುವು ?

18. ಸಾಮಾಜಿಕ ಸ್ತರ ವಿನ್ಯಾಸವು ದೇಶದಿಂದ ದೇಶಕ್ಕೆ ಭಿನ್ನವಾಗಿದೆ. ಹೇಗೆ ?

**ಅಥವಾ**

ಮೌನ ಕಣಿವೆ ಆಂದೋಲನವನ್ನು ಏಕೆ ಕೈಗೊಳ್ಳಲಾಯಿತು ?

19. ಮೂರನೇ ಆಂಗ್ಲೋ-ಮರಾಠ ಯುದ್ಧದ ಪರಿಣಾಮಗಳೇನು ?

20. ಗೋವಾವನ್ನು ಪೋರ್ಚುಗೀಸರಿಂದ ಹೇಗೆ ಮುಕ್ತಗೊಳಿಸಲಾಯಿತು ?

21. ಚಹಾ ಬೆಳೆ ಬೆಳೆಯಲು ಪೂರಕ ಅಂಶಗಳೇನು ?

22. ಸಂಪರ್ಕದ ಪ್ರಾಮುಖ್ಯತೆಗಳೇನು ?

23. ಜಾನ್ ಎಫ್. ಕೆನಡಿಯವರು ಅಮೆರಿಕನ್ನರಿಗೆ ನೀಡಿದ ಗ್ರಾಹಕ ಹಕ್ಕುಗಳನ್ನು ಹೆಸರಿಸಿ.

24. ಮಾನವ ಅಭಿವೃದ್ಧಿ ಸೂಚಿಗಳಾವುವು ?

25. ವಾರನ್ ಹೇಸ್ಟಿಂಗ್ಸ್‌ನು ಜಾರಿಗೆ ತಂದ ನ್ಯಾಯಾಲಯಗಳನ್ನು ಹೆಸರಿಸಿ.

26. ಭಾರತವು ಸ್ವಾತಂತ್ರ್ಯ ಗಳಿಸಿದ ಸಮಯದಲ್ಲಿ ಎದುರಿಸಿದ ಸಮಸ್ಯೆಗಳಾವುವು ?

27. ಭಾರತದ ಸ್ವಾತಂತ್ರ್ಯ ಹೋರಾಟದಲ್ಲಿನ ಪ್ರಮುಖ ಕ್ರಾಂತಿಕಾರಿಗಳನ್ನು ಹೆಸರಿಸಿ.

28. ದ್ವಿತೀಯ ಮಹಾಯುದ್ಧದ ಬಳಿಕ ಪ್ರಪಂಚವು ಎದುರಿಸಿದ ಮುಖ್ಯ ಸಮಸ್ಯೆಗಳಾವುವು ?

29. ಕೋಮುವಾದವು ಸಮಾಜದಲ್ಲಿ ತಂದೊಡ್ಡುವ ಸಮಸ್ಯೆಗಳಾವುವು ?

30. ಭಾರತದಲ್ಲಿ ಪರಿಸರ ಸಂರಕ್ಷಣೆಗಾಗಿ ನಡೆದ ಚಳವಳಿಗಳನ್ನು ಹೆಸರಿಸಿ.

31. ಭಾರತ ಅನುಭವಿಸುವ ನಾಲ್ಕು ಋತುಗಳನ್ನು ತಿಳಿಸಿ.

32. ಕರ್ನಾಟಕದಲ್ಲಿ ಸಾಫ್ಟ್‌ವೇರ್ ಉದ್ಯಮವು ಪ್ರಮುಖವಾಗಿ ಕೇಂದ್ರೀಕೃತಗೊಂಡಿರುವ ನಗರಗಳನ್ನು ಹೆಸರಿಸಿ.

33. ಯಾವುದಾದರೂ ಎರಡು ವಸತಿ ಯೋಜನೆಗಳನ್ನು ತಿಳಿಸಿ.

34. ಗ್ರಾಹಕ ನ್ಯಾಯಲಯಗಳ ಮೂರು ಹಂತಗಳನ್ನು ತಿಳಿಸಿ.

**IV. ಕೆಳಗಿನ ಪ್ರತಿಯೊಂದು ಪ್ರಶ್ನೆಗೂ ಆರು ವಾಕ್ಯಗಳಲ್ಲಿ ಅಥವಾ ಅಂಶಗಳಲ್ಲಿ ಉತ್ತರಿಸಿ :**

**9 × 3 = 27**

35. ಸ್ವಾತಂತ್ರ್ಯ ಚಳವಳಿಯಲ್ಲಿ ಬಾಲಗಂಗಾಧರ ತಿಲಕರ ಪಾತ್ರವನ್ನು ವಿವರಿಸಿ.

**ಅಥವಾ**

ಬ್ರಿಟಿಷರ ವಿರುದ್ಧ ಸಂಗೊಳ್ಳಿ ರಾಯಣ್ಣನ ದಂಗೆಯನ್ನು ವಿವರಿಸಿ.

36. ಹಿಮಾಲಯ ಪರ್ವತಗಳು ಭಾರತೀಯರಿಗೆ ಅತ್ಯುಪಯುಕ್ತವಾಗಿವೆ. ಹೇಗೆ ?

**ಅಥವಾ**

ಇತ್ತೀಚಿನ ದಿನಗಳಲ್ಲಿ ಮಣ್ಣಿನ ಸವೆತವನ್ನು ನಾವು ಹೇಗೆ ತಡೆಗಟ್ಟುತ್ತಿದ್ದೇವೆ ?

37. ಗ್ರಾಮೀಣಾಭಿವೃದ್ಧಿಯಲ್ಲಿ ಪಂಚಾಯತ್‌ರಾಜ್ ಸಂಸ್ಥೆಗಳ ಪಾತ್ರವನ್ನು ತಿಳಿಸಿ.

**ಅಥವಾ**

ಗ್ರಾಮೀಣಾಭಿವೃದ್ಧಿಗಾಗಿ ಇರುವ ಅವಶ್ಯಕ ಕ್ರಮಗಳನ್ನು ತಿಳಿಸಿ.

38. ಬ್ಯಾಂಕುಗಳಲ್ಲಿ ಖಾತೆಗಳನ್ನು ತೆರೆಯಲು ಅನುಸರಿಸುವ ಹಂತಗಳು ಯಾವುವು ?

**ಅಥವಾ**

ಗ್ರಾಹಕ ಸಂರಕ್ಷಣಾ ಕಾಯ್ದೆಯ ಉದ್ದೇಶಗಳೇನು ?

39. ಪ್ರಾರ್ಥನಾ ಸಮಾಜವು ಪ್ರತಿಪಾದಿಸಿದ ಸುಧಾರಣೆಗಳನ್ನು ವಿವರಿಸಿ.

40. ಭಾರತದ ಪ್ರಥಮ ಸ್ವಾತಂತ್ರ್ಯ ಸಂಗ್ರಾಮದ ವಿಫಲತೆಗೆ ಕಾರಣಗಳನ್ನು ತಿಳಿಸಿ.

41. ಭಾರತ ಮತ್ತು ಅಮೆರಿಕ ಸಂಯುಕ್ತ ಸಂಸ್ಥಾನಗಳ ನಡುವಿನ ಸಂಬಂಧವನ್ನು ವಿವರಿಸಿ.

42. ಅತಿ ಹೆಚ್ಚು ಜನಸಂಖ್ಯೆ ಹೊಂದಿರುವ ಭಾರತದಲ್ಲಿ ನಿರುದ್ಯೋಗ ಸಮಸ್ಯೆಯನ್ನು ಹೇಗೆ ಪರಿಹರಿಸಬಹುದು ?

43. ಚಂಡ ಮಾರುತದ ಮುನ್ನೆಚ್ಚರಿಕೆಯ ಕ್ರಮಗಳಾವುವು ?

**V. ಕೆಳಗಿನ ಪ್ರತಿಯೊಂದು ಪ್ರಶ್ನೆಗೂ ಎಂಟು ವಾಕ್ಯಗಳಲ್ಲಿ ಅಥವಾ ಅಂಶಗಳಲ್ಲಿ ಉತ್ತರಿಸಿ :**

**4 × 4 = 16**

44. ಬ್ರಿಟಿಷ್ ಶಿಕ್ಷಣವು ಭಾರತೀಯರ ಮೇಲೆ ಪ್ರಮುಖ ಪರಿಣಾಮಗಳನ್ನು ಬೀರಿತು. ದೃಢೀಕರಿಸಿ.

**ಅಥವಾ**

ಅಸಹಕಾರ ಚಳವಳಿಯ ಸಂದರ್ಭದಲ್ಲಾದ ಪ್ರಮುಖ ಬೆಳವಣಿಗೆಗಳೇನು ?

45. "ಡಾ. ಬಿ.ಆರ್. ಅಂಬೇಡ್ಕರ್‌ರವರು ಒಬ್ಬ ಶ್ರೇಷ್ಠ ಸಾಮಾಜಿಕ ಸುಧಾರಕರು." ದೃಢೀಕರಿಸಿ.

46. ಭ್ರಷ್ಟಾಚಾರದ ಪರಿಣಾಮಗಳೇನು ?

47. ಭಾರತದಲ್ಲಿನ ಅರಣ್ಯಗಳ ಸಂರಕ್ಷಣೆಗೆ ಕೈಗೊಂಡಿರುವ ಕ್ರಮಗಳು ಯಾವುವು ?

**VI.** 48. **ಭಾರತದ ನಕ್ಷೆಯನ್ನು ಬರೆದು, ಅದರಲ್ಲಿ ಈ ಕೆಳಗಿನವುಗಳನ್ನು ಗುರುತಿಸಿ : 1 + 4 = 5**

a) ದಾಮೋದರ ನದಿ ಕಣಿವೆ

b) ಭದ್ರಾವತಿ

c) ಕಾಂಡ್ಲಾ

d) ಬೆಂಗಳೂರು

***ದೃಷ್ಟಿ ವಿಕಲಚೇತನ ವಿದ್ಯಾರ್ಥಿಗಳಿಗೆ ಪರ್ಯಾಯ ಪ್ರಶ್ನೆ : (ಪ್ರಶ್ನೆ ಸಂಖ್ಯೆ 48 ರ ಬದಲಿಗೆ)***

ವಿವಿಧೋದ್ದೇಶ ನದಿ ಕಣಿವೆ ಯೋಜನೆಗಳ ಮುಖ್ಯ ಉದ್ದೇಶಗಳನ್ನು ತಿಳಿಸಿ. **5**